## ಧಾರಾವಾಹಿ ಲೇಖನ

# ರಾಮಕೃಷ್ಣ ಮಹಾಸಂಘದ ಗುರು ಪರಂಪರೆ

ಮೀನಾ ಎ.

**(ಹಿಂದಿನ ಸಂಚಿಕೆಯಿಂದ)**

### ಸ್ವಾಮಿ ವಿಜ್ಞಾನಾನಂದಜಿ ಮಹಾರಾಜ್

ಸ್ವಾಮಿ ವಿಜ್ಞಾನಾನಂದಜಿ ಮಹಾರಾಜ್ ಅವರು ರಾಮಕೃಷ್ಣ ಮಹಾಸಂಘದ ನಾಲ್ಕನೆಯ ಪರಮಾಧ್ಯಕ್ಷರು ಮತ್ತು ಪ್ರತ್ಯಕ್ಷ ಶಿಷ್ಯರಲ್ಲಿ ಕಡೆಯವರು. ಇವರು ತಮ್ಮ ಚಿಕ್ಕವಯಸ್ಸಿನಲ್ಲಿಯೇ ಶ್ರೀರಾಮಕೃಷ್ಣರ ದರ್ಶನಭಾಗ್ಯವನ್ನು ಪಡೆದರು. ತಮ್ಮ ನಾಯಕರಾದ ಸ್ವಾಮಿ ವಿವೇಕಾನಂದರಲ್ಲಿ ಅವರಿಗೆ ಅತೀವ ಪ್ರೀತಿ. ಸ್ವಾಮಿಜಿಯ ಆದೇಶದಂತೆ ನಡೆದುಕೊಳ್ಳುವುದೇ ಅವರ ಜೀವನಧ್ಯೇಯವಾಗಿತ್ತು. ಸ್ವಾಮಿಗಳು ಅಲಹಾಬಾದಿನಲ್ಲಿ ರಾಮಕೃಷ್ಣ ಮಠದ ಸ್ಥಾಪನೆಯನ್ನು ಮಾಡಿದರು. ತಮ್ಮ ಸಹೋದರ ಸಂನ್ಯಾಸಿಗಳ ಮತ್ತು ಇತರ ಸಾಧುಗಳ ಸೇವೆಯನ್ನು ಪ್ರೀತಿಪೂರ್ವಕವಾಗಿ ಮಾಡುತ್ತಿದ್ದರು. ಯಾವಾಗಲೂ ಭಗವದ್‌ಧ್ಯಾನದಲ್ಲಿ ನಿರತರಾಗಿರುತ್ತಿದ್ದರು. ಅನಾರೋಗ್ಯದಿಂದ ಕಷ್ಟಪಡುತ್ತಿದ್ದರೂ ಯಾರಿಂದಲೂ ಸೇವೆಯನ್ನೂ ಸ್ವೀಕರಿಸುತ್ತಿರಲಿಲ್ಲ; ವೈದ್ಯರಿಗೆ ತೋರಿಸಲೂ ಹಿಂಜರಿಯುತ್ತಿದ್ದರು. ಅವರು ಹೇಳುತ್ತಿದ್ದರು, "ಶ್ರೀರಾಮಕೃಷ್ಣರಿಗಿಂತ ಶ್ರೇಷ್ಠ ವೈದ್ಯರು ಇನ್ನಾರು ತಾನೇ ಇದ್ದಾರೆ?"



ಸ್ವಾಮಿ ವಿಜ್ಞಾನಾನಂದರು ದಯಾವಂತರು. ಆಶ್ರಮದ ಬ್ರಹ್ಮಚಾರಿಗಳನ್ನು, ಸೇವಕರನ್ನೂ ಬಹುಪ್ರೀತಿಯಿಂದ ಕಾಣುತ್ತಿದ್ದರು. ಅವರ ದಿವ್ಯ ಸಂಪರ್ಕಕ್ಕೆ ವೇಣಿಮಾಧವ ಎಂಬ ಅನಾಥ ಬಾಲಕ ಬಂದನು. ಅವನ ಬದುಕು ಅವರ ಆಶ್ರಯದಲ್ಲಿ ಸರ್ವಾಂಗ ಸುಂದರವಾಗಿ ರೂಪುಗೊಂಡಿತು.

ಸ್ವಾಮಿ ವಿಜ್ಞಾನಾನಂದರಿಗೆ ಸ್ವಾಮಿ ವಿವೇಕಾನಂದರ ಮೇಲೆ ಹಾಗೂ ಸ್ವಾಮಿ ಬ್ರಹ್ಮಾನಂದರ ಮೇಲೆ ವಿಶೇಷ ಪ್ರೀತಿಗೌರವಗಳಿತ್ತು. ಅವರು ೧೯೩೭ ರಲ್ಲಿ ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾಗಿ ನೇಮಕಗೊಂಡರು. ಸ್ವತಃ ಇಂಜಿನಿಯರ್ ಆಗಿದ್ದ ಅವರು ಈಗ ಬೇಲೂರುಮಠದಲ್ಲಿ ಕಾಣುವ ಭವ್ಯವಾದ ಶ್ರೀರಾಮಕೃಷ್ಣ ಮಂದಿರದ ನಿರ್ಮಾಣ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರು. ಅವರು ಮಂದಿರದ ಪ್ರತಿಷ್ಠಾಪನೆಯ ದಿವಸ, ಗರ್ಭಗುಡಿಯಲ್ಲಿ, ಸ್ವಾಮಿ ವಿವೇಕಾನಂದ, ಸ್ವಾಮಿ ಬ್ರಹ್ಮಾನಂದ ಮುಂತಾದ ತಮ್ಮ ಸಹೋದರ ಸಂನ್ಯಾಸಿಗಳ ದಿವ್ಯದರ್ಶನ ಪಡೆದರು!

### ಸ್ವಾಮಿ ಶುದ್ಧಾನಂದಜಿ ಮಹಾರಾಜ್

ಸ್ವಾಮಿ ಶುದ್ಧಾನಂದಜಿ ಮಹಾರಾಜ್ ಅವರು ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರ ನಂತರದ ಪೀಳಿಗೆಯವರಲ್ಲಿ ಮೊದಲ ಪರಮಾಧ್ಯಕ್ಷರಾಗಿ ಆಯ್ಕೆಯಾದವರು. ಅವರ ಪೂರ್ವಾಶ್ರಮದ ಹೆಸರು ಸುಧೀರ ಚಂದ್ರ ಚಕ್ರವರ್ತಿ. ಇವರು ಸ್ವಾಮಿ ವಿವೇಕಾನಂದರಿಂದಲೇ ಮಂತ್ರದೀಕ್ಷೆಯನ್ನು ಪಡೆದವರು; ಅವರಿಂದಲೇ ಆಧ್ಯಾತ್ಮಿಕ ಶಿಕ್ಷಣವನ್ನು ಪಡೆದು, ಮಹಾಸಂಘದಲ್ಲಿ ಬಹು ಗೌರವಾನ್ವಿತ ಸಂನ್ಯಾಸಿಯಾಗಿ ಖ್ಯಾತಿ ಗಳಿಸಿದರು.



ಚಿಕ್ಕ ವಯಸ್ಸಿನಲ್ಲೇ ವೈರಾಗ್ಯ ಸಂಪನ್ನರಾಗಿದ್ದ ಇವರು ಸಾಧನೆ ಭಜನೆಗಳಲ್ಲಿ ಬಹುಕಾಲ ಕಳೆಯುತ್ತಿದ್ದರು. ತೀವ್ರ ವೈರಾಗ್ಯದಿಂದ ಬಾಲ್ಯದಲ್ಲೇ ಎರಡು ಬಾರಿ ಮನೆ ಬಿಟ್ಟು ಹೊರಟುಹೋಗಿದ್ದರು. ಕ್ರಮೇಣ ಮಾಸ್ಟರ್ ಮಹಾಶಯರ ಕೃಪೆಯಿಂದ ವರಾಹನಗರ ಮಠಕ್ಕೆ ಬಂದು, ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರ ನಿಕಟ ಸಂಪರ್ಕಕ್ಕೆ ಬಂದರು. ಅಮೆರಿಕದಿಂದ ಸ್ವಾಮಿ ವಿವೇಕಾನಂದರು ತಿರುಗಿಬಂದಾಗ, ಅವರ ಸೇವೆಯನ್ನೂ ಕೈಗೊಂಡರು.

ಒಮ್ಮೆ ಸ್ವಾಮಿ ಶುದ್ಧಾನಂದರನ್ನು ಓರ್ವ ಭಕ್ತ ಈ ರೀತಿ ಪ್ರಶ್ನೆ ಮಾಡಿದನು: "ಮಹಾಶಯರೆ, ಎಲ್ಲವನ್ನೂ ತೊರೆದು ತಾವೇಕೆ ಸಂನ್ಯಾಸಿಗಳಾದಿರಿ?" ಅದಕ್ಕೆ ಸ್ವಾಮಿಗಳು ವಿನೀತರಾಗಿಯೇ ಉತ್ತರಿಸಿದರು: "ನೋಡಪ್ಪಾ, ಎಲ್ಲರೂ ಒಂದು ದಿನ ಈ ಪ್ರಪಂಚ ಬಿಟ್ಟು ಹೋಗಲೇಬೇಕಲ್ಲವೇ? ಮನೆಯಲ್ಲಿದ್ದರೆ, ಮಹಾಕಾಲನಾದ ಮೃತ್ಯುವಿನ ಕರೆ ಬಂದರೆ ಹೋಗುವುದು ಕಷ್ಟವಾಗಬಹುದೆಂದು ನಾನು ಎಲ್ಲವನ್ನೂ ಬಿಟ್ಟು, ಕಾವಿಯನ್ನು ಧರಿಸಿ ಈಗಿನಿಂದಲೇ ಸಾವಿಗಾಗಿ ಸಿದ್ಧನಾಗುತ್ತಿದ್ದೇನೆ."

ಸ್ವಾಮಿ ಶುದ್ಧಾನಂದರದು ಆಳವಾದ ಪಾಂಡಿತ್ಯ. ಅವರು ಸ್ವಾಮಿ ವಿವೇಕಾನಂದರ ಕೃತಿಗಳನ್ನು ಬಂಗಾಳಿ ಭಾಷೆಗೆ ತರ್ಜುಮೆ ಮಾಡಿದರು; 'ಉದ್ಬೋಧನ' ಬಂಗಾಳಿ ಪತ್ರಿಕೆಯ ಸಂಪಾದಕರಾಗಿದ್ದರು. ಸ್ವಾಮಿಗಳು ೧೯೨೭ ರಿಂದ ೧೯೩೭ ರವರೆಗೆ ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ೧೯೩೮ ರಲ್ಲಿ ಅಧ್ಯಕ್ಷ ಪದವಿಯನ್ನು ಅಲಂಕರಿಸಿದರು. ಆದರೆ ಕೆಲವೇ ತಿಂಗಳಲ್ಲಿ ಮಹಾಸಮಾಧಿ ಹೊಂದಿದರು.

ಒಂದು ದಿನ ಸ್ವಾಮಿಗಳ ಬಳಿ ಒಬ್ಬ ಯುವಕ ಬಂದನು; ಮಂತ್ರದೀಕ್ಷೆಗಾಗಿ ಪ್ರಾರ್ಥಿಸಿದನು. ಆ ಸಮಯಕ್ಕೇ ಸ್ವಾಮಿ ಮಾಧವಾನಂದಜಿ ಅಲ್ಲಿಗೆ ಬಂದು, ಶುದ್ಧಾನಂದರಿಗೆ ಪ್ರಣಾಮ ಮಾಡಿದರು. ಅವರ ಪೂರ್ವಾಶ್ರಮದ ಹೆಸರು ನಿರ್ಮಲ್ ಎಂದು. ಸ್ವಾಮಿ ಶುದ್ಧಾನಂದರು ಅವರಿಗೆ ಹೀಗೆ ಹೇಳಿದರು: "ನೋಡು ನಿರ್ಮಲ್, ಈ ಹುಡುಗ ನನ್ನ ಬಳಿಗೆ ದೀಕ್ಷೆಗಾಗಿ ಬಂದಿದ್ದಾನೆ. ಅವನು ಭಾವಿಸುತ್ತಿದ್ದಾನೆ, ನಾನು ಅಧ್ಯಕ್ಷಸ್ಥಾನದಲ್ಲಿರುವೆ ಎಂದು! ಆದರೆ ನೋಡು, ನನಗೇನೂ ಆಗಿಲ್ಲ, ನೀನೇನಾದರೂ ದೀಕ್ಷೆಯನ್ನು ಕೊಡುವೆಯೇನೋ, ನೋಡು? " ಎಂತಹ ನಿರಭಿಮಾನ ಅವರದು!

ಸ್ವಾಮಿ ಶುದ್ಧಾನಂದಜಿ ಯಾವಾಗಲೂ ಹೇಳುತ್ತಿದ್ದರು, "ನೋಡಿ, ಸ್ವಾಮಿ ವಿವೇಕಾನಂದರ ಕೃಪೆಯಿಂದ ನಾನು ಇಷ್ಟು ಅರಿತಿದ್ದೇನೆ– ನಮ್ಮೆಲ್ಲ ಕಾರ್ಯಕಲಾಪಗಳೂ, ಅದು ಪರಿಹಾರ ಕಾರ್ಯವಾಗಿರಲಿ, ಶಾಲಾಕಾಲೇಜುಗಳನ್ನು ನಡೆಸುವುದಾಗಲಿ, ಆಸ್ಪತ್ರೆ ನಡೆಸುವುದಾಗಲಿ, ಅಥವಾ ಭಾಷಣ ಮಾಡುವುದಾಗಲಿ – ಎಲ್ಲವೂ ಭಗವಂತನ ಉಪಾಸನೆಯೇ ಆಗಿವೆ. ಅವುಗಳೆಲ್ಲವೂ ಶ್ರೀರಾಮಕೃಷ್ಣರ ಮಹಿಮಾ ಪ್ರಚಾರಕ್ಕಾಗಿ ಮಾತ್ರ."

### ಸ್ವಾಮಿ ವಿರಜಾನಂದಜಿ ಮಹಾರಾಜ್



ಸ್ವಾಮಿ ವಿರಜಾನಂದರ ಪೂರ್ವಾಶ್ರಮದ ಹೆಸರು ಕಾಲಿ ಕೃಷ್ಣ ಎಂದು. ಅವರ ಮನಸ್ಸು ಚಿಕ್ಕ ವಯಸ್ಸಿನಲ್ಲಿಯೇ ಭಗವನ್ಮುಖಿವಾಗಿತ್ತು. ಶ್ರೀರಾಮಕೃಷ್ಣರ ಸಾಕ್ಷಾತ್ ಶಿಷ್ಯರ ನಂತರ ವರಾಹನಗರದ ಮಠಕ್ಕೆ ಬಂದು ನೆಲೆಸಿದವರಲ್ಲಿ ಅವರೇ ಮೊದಲಿಗರು.

ವರಾಹನಗರದ ಮಠದಲ್ಲಿ ಅವರು ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರ ಪ್ರೀತಿಯ ಸಹವಾಸವನ್ನು ಹೊಂದಿದರು. ಅವರೆಲ್ಲರ ಸೇವೆಯನ್ನೂ ಮಾಡುತ್ತಿದ್ದರು. ಅವರ ನಿಷ್ಠೆಯನ್ನು ಕಂಡು, ಸ್ವಾಮಿ ಶಾರದಾನಂದಜಿ ಹೀಗೆ ಉದ್ಗರಿಸಿದರಂತೆ: "ಯಾರಪ್ಪಾ ಈ ಬಾಲಕ? ಎಲ್ಲರ ಸೇವೆಯನ್ನೂ ತಾಯಿಯಂತೆ ಮಾಡುತ್ತಿದ್ದಾನೆ."

ಶ್ರೀಮಾತೆ ಶಾರದಾದೇವಿಯರ ಶಿಷ್ಯರಾದ ಅವರು ಸ್ವಾಮಿ ವಿವೇಕಾನಂದರಿಂದ ೧೮೯೭ ರಲ್ಲಿ ಸಂನ್ಯಾಸ ದೀಕ್ಷೆಯನ್ನು ಪಡೆದುಕೊಂಡರು. ವೈರಾಗ್ಯಸಂಪನ್ನರಾಗಿದ್ದ ಇವರು ಯಾವಾಗಲೂ ಸಾಧನೆ–ಭಜನೆಗಳಲ್ಲಿ ಮಗ್ನರಾಗಿರುತ್ತಿದ್ದರು.

೧೮೯೭ ರಲ್ಲಿ ಸ್ವಾಮಿ ವಿವೇಕಾನಂದರು ವಿರಜಾನಂದರನ್ನು ಪ್ರಚಾರಕ್ಕಾಗಿ ಢಾಕಾ ನಗರಕ್ಕೆ ಕಳಿಸುವಾಗ, ಈ ಮಾತನ್ನು ಹೇಳುತ್ತಾರೆ, "ವಿಶ್ವಾಸವಿಡು. ಶ್ರೀರಾಮಕೃಷ್ಣರ ಶಕ್ತಿ ನಿನ್ನಲ್ಲಿ ಕೆಲಸ ಮಾಡುತ್ತದೆ. ತಿಳಿದುಕೋ, ಈ ಸಂಘವೆಂದರೆ ಶ್ರೀರಾಮಕೃಷ್ಣರ ಸಮಷ್ಟಿ ಶರೀರವಲ್ಲದೆ ಬೇರಲ್ಲ."

ಸ್ವಾಮಿಗಳು ಮಾಯಾವತಿಯ ಅದ್ವೈತ ಆಶ್ರಮದಲ್ಲಿ ಬಹಳ ಕಾಲ ಸೇವೆ ಸಲ್ಲಿಸಿ, ಶ್ಯಾಮಲಾತಲ ಎಂಬಲ್ಲಿ ಒಂದು ನೂತನ ಆಶ್ರಮವನ್ನು ಸ್ಥಾಪಿಸಿದರು. ೧೯೩೮ ರಲ್ಲಿ ಸಂಘಗುರುವಾದ ಅವರು ಸುಮಾರು ೧೨ ವರ್ಷಗಳ ಕಾಲ ಸಾವಿರಾರು ಮುಮುಕ್ಷುಗಳಿಗೆ ಸಾಧನೆಯ ದ್ವಾರವನ್ನು ತೆರೆದಿಟ್ಟರು. ಅಷ್ಟು ದೊಡ್ಡ ಪದವಿಯಲ್ಲಿ ಇದ್ದರೂ ಸಣ್ಣಪುಟ್ಟ ವಿಷಯಗಳಿಗೂ ಗಮನ ಕೊಡುತ್ತಿದ್ದರು. ಅವರ ಹೃದಯದ ಬಾಗಿಲು ಸದಾ ಎಲ್ಲರಿಗೂ ತೆರೆದಿರುತ್ತಿತ್ತು.

ಒಬ್ಬ ಭಕ್ತ ಸ್ವಾಮಿಗಳಿಂದ ದೀಕ್ಷೆ ಪಡೆದು ಮನೆಯಲ್ಲಿಯೇ ಶ್ರೀರಾಮಕೃಷ್ಣರ ಉಪಾಸನೆಯನ್ನು ಮಾಡಲು ಆರಂಭಿಸಿದನು. ಬ್ರಾಹ್ಮ ಸಮಾಜದ ಅನುಯಾಯಿಯಾಗಿದ್ದ ಆತನ ಪತ್ನಿ ಇದರಿಂದಾಗಿ ಮನೆಯಲ್ಲಿ ಅಶಾಂತಿಯ ವಾತಾವರಣವನ್ನು ಉಂಟುಮಾಡಿದ್ದಳು. ಇದನ್ನು ಅರಿತ ಸ್ವಾಮಿ ವಿರಜಾನಂದರು, ಇನ್ನೊಬ್ಬ ಸಂನ್ಯಾಸಿಗಳ ಜೊತೆಗೆ ತಾವೇ ಆ ಭಕ್ತನ ಮನೆಗೆ ಬಂದರು. ಪತ್ನಿಯೇ ಬಾಗಿಲು ತೆಗೆದಳು; ತನ್ನ ಪತಿಯ ಗುರುವನ್ನು ಸ್ವಲ್ಪ ಕಾಲ ದಿಟ್ಟಿಸಿ ನೋಡಿ, ಇದ್ದಕ್ಕಿದ್ದಂತೆ, ಅವರ ಕಾಲುಗಳನ್ನು ಹಿಡಿದುಕೊಂಡು, ರೋದಿಸಲಾರಂಭಿಸಿದಳು. ಅದಲ್ಲದೆ ಹೀಗೆ ಪ್ರಾರ್ಥಿಸಿದಳು, "ಮಹಾರಾಜ್, ನನ್ನನ್ನು ಆಶೀರ್ವದಿಸಿ, ನನಗೆ ಶಾಂತಿಯನ್ನು ನೀಡಿ." ಸ್ವಾಮಿಗಳು ಅವಳನ್ನು ತುಂಬು ಹೃದಯದಿಂದ ಆಶೀರ್ವದಿಸಿದರು, ಹೀಗೆ ಆ ಮನೆಯಲ್ಲಿ ಶಾಂತಿ ಸ್ಥಾಪಿಸಿದರು. ಸ್ವಾಮಿ ವಿರಜಾನಂದಜಿ ಅವರು ಇಂತಹ ದಿವ್ಯಶಕ್ತಿ ಸಂಪನ್ನರಾಗಿದ್ದರು.

(ಮುಂದುವರಿಯುವುದು)

## ಸ್ನೇಹಪ್ರಭ

### ಕೀಳರಿಮೆಯನ್ನು ಹೋಗಲಾಡಿಸಿಕೊಳ್ಳುವುದು ಹೇಗೆ?

ಕೀಳರಿಮೆಗೆ ಎರಡು ಮುಖ್ಯ ಕಾರಣಗಳಿವೆ – ಒಂದು ವಾತಾವರಣಕ್ಕೆ ಸಂಬಂಧಪಟ್ಟುದು (environmental). ಮತ್ತೊಂದು ವೈಯಕ್ತಿಕವಾದುದು (individual); ತಂದೆತಾಯಿಗಳು ಮತ್ತು ಇತರರು ಮಕ್ಕಳನ್ನು ಕೀಳಾಗಿ ಕಾಣುವುದರಿಂದ, ಅವರ ಶಕ್ತಿಸಾಮರ್ಥ್ಯಗಳನ್ನು ಗುರುತಿಸದೇ, ಉತ್ತೇಜನ ಕೊಡದೇ ಇರುವುದರಿಂದ, 'ನೀನು ದಡ್ಡ, ಕೆಲಸಕ್ಕೆ ಬಾರದವನು' ಎಂದು ಆಗಾಗ ಬೈಯುತ್ತಿರುವುದರಿಂದ ಅದಕ್ಕೆ ಅನುಗುಣವಾದ ಸ್ವವ್ಯಕ್ತಿತ್ವ ಚಿತ್ರವನ್ನು ಮಕ್ಕಳು ಬೆಳೆಸಿಕೊಳ್ಳುತ್ತಾರೆ. ಇದೇ ವೈಯಕ್ತಿಕ ಕೀಳರಿಮೆಗೆ ಕಾರಣವಾಗುತ್ತದೆ. ದಬ್ಬಾಳಿಕೆ ಪ್ರವೃತ್ತಿಯ ತಂದೆತಾಯಿಗಳು ಮಕ್ಕಳಲ್ಲಿ ಕೀಳರಿಮೆಯನ್ನು ಬೆಳೆಸುತ್ತಾರೆ. ಶಾಲೆಯ ಶಿಕ್ಷಕರು ಮಕ್ಕಳನ್ನು ನಡೆಸಿಕೊಳ್ಳುವ ರೀತಿಯೂ ಕೀಳರಿಮೆಗೆ ಕಾರಣವಾಗುತ್ತದೆ. ಇದು ವಾತಾವರಣಕ್ಕೆ ಸಂಬಂಧಿಸಿದ ಕಾರಣ.

ಒಬ್ಬ ವ್ಯಕ್ತಿಯು ಅನೇಕ ರಂಗಗಳಲ್ಲಿ ಸೋಲನ್ನು ಅನುಭವಿಸಿದಾಗಲೂ ತಾನು ಯಾತಕ್ಕೂ ಬಾರದವನೆಂಬ ಕೀಳರಿಮೆಯನ್ನು ಬೆಳೆಸಿಕೊಳ್ಳುತ್ತಾನೆ. ಆಧ್ಯಾತ್ಮಿಕ ಪ್ರವೃತ್ತಿವುಳ್ಳ ಕೆಲವರು ತಮ್ಮ ಹಲವು ಆಸೆಗಳನ್ನು, ವಿಶೇಷವಾಗಿ ಕಾಮವನ್ನು, ನಿಗ್ರಹಿಸಲಾರದೆ ಕೀಳರಿಮೆಯನ್ನು ಬೆಳೆಸಿಕೊಳ್ಳುತ್ತಾರೆ. ತಮ್ಮ ಸಾಮರ್ಥ್ಯಕ್ಕಿಂತ ಅಧಿಕವಾದ ಮಹತ್ವಾಕಾಂಕ್ಷೆ ಉಳ್ಳವರು, ತಮ್ಮ ಆಸೆಗಳನ್ನು ಪೂರ್ತಿಗೊಳಿಸಲಾಗದೆ ಕೀಳರಿಮೆಗೆ ಬಲಿಯಾಗುತ್ತಾರೆ.

**ಕೀಳರಿಮೆಗೆ ರಾಮಬಾಣವೆಂದರೆ ಆತ್ಮವಿಶ್ವಾಸ**. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "..ನಿಜವಾದ ಆತ್ಮಶ್ರದ್ಧೆಯನ್ನು ನಮ್ಮಲ್ಲಿ ಉಜ್ಜೀವನಗೊಳಿಸಬೇಕಾಗಿದೆ. ಆತ್ಮಶ್ರದ್ಧೆಯ ಹಣತೆಯನ್ನು ಹಚ್ಚಬೇಕಾಗಿದೆ." **"ನಾನು ದೇಹವಲ್ಲ, ಮನಸ್ಸಲ್ಲ, ನಾನು ಪವಿತ್ರಾತ್ಮ, ದಿವ್ಯಾತ್ಮ"** ಎಂದು ಮುಂತಾಗಿ ತನ್ನ ನೈಜ ಸ್ವರೂಪದ ಬಗ್ಗೆ ಚಿಂತಿಸಬೇಕು. ತನ್ನ ಬಗ್ಗೆ ಉದಾತ್ತ ಭಾವನೆಯನ್ನು ಬೆಳೆಸಿಕೊಂಡಾಗ ಕೀಳರಿಮೆ ಸ್ವಾಭಾವಿಕವಾಗಿಯೇ ಹೊರಟುಹೋಗುತ್ತದೆ. ಪರಿಸರದ ಒತ್ತಡ ಏನೇ ಇದ್ದರೂ ನಮ್ಮ ಆತ್ಮ ಬಲವನ್ನು ಮೆರೆಯಬೇಕು, ಸೋಲಿಗೆ ಮಣಿಯಬಾರದು. ಸಣ್ಣ ಸಣ್ಣ ಕಾರ್ಯಗಳಲ್ಲಿ ಯಶಸ್ಸನ್ನು ಸಾಧಿಸುತ್ತ ಹೆಚ್ಚು ಹೆಚ್ಚು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕು. ಆಗ ಕೀಳರಿಮೆ ಕಡಮೆಯಾಗುತ್ತದೆ.

(ಬರಹ: ಸ್ವಾಮಿ ನಿತ್ಯಸ್ಥಾನಂದ)